

# ಬಸ್ರೂರರ ಮಾಟ-ಮಂತ್ರ!

ಸಂಗೀತ ನಿರ್ದೇಶಕರಾಗಿ ಚಿತ್ರರಸಿಕರಿಗೆ ಹೆಚ್ಚು ಪರಿಚಿತರಾಗಿರುವ ರವಿ ಬಸ್ರೂರು ಈಗ ನಿರ್ದೇಶಕರಾಗಿ ಪ್ರೇಕ್ಷಕರನ್ನು ಬೆಚ್ಚಿಬೀಳಿಸಲು ಹೊರಟಿದ್ದಾರೆ. ತೆರೆಕಾಣಲು ಸಿದ್ಧವಾಗಿರುವ ಅವರ ನಿರ್ದೇಶನದ ಸಿನಿಮಾದ ಶೀರ್ಷಿಕೆ 'ಕಟಕ' (ಅ. 13ರಂದು ತೆರೆಗೆ). ಹಾರರ್ ಚಿತ್ರಗಳು ಗೆಲ್ಲುತ್ತಿರುವ ಸಂದರ್ಭದಲ್ಲಿ ವಾಮಾಚಾರದ ಕಥೆಯನ್ನು ಒಳಗೊಂಡ 'ಕಟಕ' ಪ್ರೇಕ್ಷಕರನ್ನು ಸೆಳೆಯಲಿದೆ ಎನ್ನುವ ಲೆಕ್ಕಾಚಾರ ನಿರ್ದೇಶಕರದು.

'ಕಟಕ' ಮಾಟ–ಮಂತ್ರದ ಕುರಿತ ಚಿತ್ರವಾದರೂ, 'ಇದೊಂದು ನೈಜ ಕಥೆಯ ಚಿತ್ರ' ಎಂದು ರವಿ ಹೇಳಿಕೊಳ್ಳುತ್ತಾರೆ. ಕರಾವಳಿ ಪರಿಸರದಲ್ಲಿ ಹದಿನಾಲ್ಕು ವರ್ಷಗಳ ಹಿಂದೆ ನಡೆದ ಘಟನೆಯೊಂದನ್ನು ಚಿತ್ರದಲ್ಲಿ ನಿರೂಪಿಸಲಾಗಿದೆಯಂತೆ. ಐದು ವರ್ಷದ ಬಾಲಕಿಯೊಬ್ಬಳ ಮೇಲೆ ನಡೆಯುವ ವಾಮಾಚಾರ ಪ್ರಯೋಗದ ಕಥೆಯನ್ನು ಸಿನಿಮೀಯವಾಗಿ ಚಿತ್ರಿಸಲಾಗಿದ್ದು, ಮಾಂತ್ರಿಕ ಜಗತ್ತಿನ ಕರಾಳಮುಖವನ್ನು ಸಿನಿಮಾ ತೋರಿಸಲಿದೆಯಂತೆ.

ಕಿರುತೆರೆಯ ಜನಪ್ರಿಯ ಧಾರಾವಾಹಿ 'ಗುಡ್ಡದಭೂತ' ಚಿತ್ರೀಕರಣ ನಡೆದ ಮನೆಯಲ್ಲೇ ತಮ್ಮ ಚಿತ್ರವನ್ನೂ ರವಿ ಚಿತ್ರೀಕರಿಸಿದ್ದಾರೆ. ಹಾರರ್ ಸಿನಿಮಾಗಳಲ್ಲಿ ಸಂಗೀತ ಹೆಚ್ಚು ಪರಿಣಾಮಕಾರಿಯಾಗಿರಬೇಕು ಎನ್ನುವ ಕಾರಣಕ್ಕಾಗಿ, ಹಾಲಿವುಡ್ ಚಿತ್ರಗಳಿಗೆ ಕೆಲಸ ಮಾಡುವ ಸಂಸ್ಥೆಗಳಿಂದ ತಮ್ಮ ಚಿತ್ರದ ಧ್ವನಿವಿನ್ಯಾಸ ಮಾಡಿಸಿದ್ದಾರೆ. ಅಶೋಕ್ ಹಾಗೂ ಸ್ಪಂದನಾ ಚಿತ್ರದ ಪ್ರಮುಖ ಪಾತ್ರಗಳಲ್ಲಿದ್ದಾರೆ. ಶ್ಲಾಘ ಸಾಲಿಗ್ರಾಮ ಎನ್ನುವ ಬಾಲಕಿ ಚಿತ್ರದ ಮುಖ್ಯಪಾತ್ರದಲ್ಲಿ ನಟಿಸಿದ್ದಾಳೆ.

ಇತ್ತೀಚೆಗಷ್ಟೇ 'ಕಟಕ' ಚಿತ್ರದ ಟ್ರೈಲರ್ ಬಿಡುಗಡೆಯಾಗಿದೆ. ಈ ಟ್ರೈಲರ್ ಹದಿಮೂರು ಭಾಷೆಗಳಲ್ಲಿ ಬಿಡುಗಡೆಯಾಗಿರುವುದನ್ನು ನೋಡಿದರೆ, 'ಕಟಕ'ದ ಭೀತಿಯನ್ನು ಪರಭಾಷೆಯ ಪ್ರೇಕ್ಷಕರಿಗೂ ದಾಟಿಸಲು ಚಿತ್ರತಂಡ ಪ್ರಯತ್ನಿಸುತ್ತಿರುವಂತಿದೆ.



# ಮಯೂರಿ ಹಾಡು-ಪಾಡು

'ಕೃಷ್ಣಲೀಲಾ' ಚಿತ್ರದ ಮೂಲಕ ಯಶಸ್ಸು ಕಂಡ ನಟಿ ಮಯೂರಿ, ಕನ್ನಡ ಚಿತ್ರರಂಗಕ್ಕೆ ಕಿರುತೆರೆಯ ಕೊಡುಗೆ. 'ಅಶ್ವಿನಿ ನಕ್ಷತ್ರ' ಅವರಿಗೆ ತಾರಾ ವರ್ಚಸ್ಸು ತಂದುಕೊಟ್ಟ ಜನಪ್ರಿಯ ಧಾರಾವಾಹಿ. ಈ ವರ್ಚಸ್ಸಿನ ಹಿನ್ನೆಲೆಯಲ್ಲೇ ಚಿತ್ರರಂಗಕ್ಕೆ ಬಂದ ಮಯೂರಿ, ಶಶಾಂಕ್ ನಿರ್ದೇಶನದ 'ಕೃಷ್ಣಲೀಲಾ'ದಲ್ಲೂ ಗೆಲುವು ಕಂಡರು. ನಂತರದ 'ಇಷ್ಟಕಾಮ್ಯ' ಚಿತ್ರದಲ್ಲೂ ಅವರ ಅಭಿನಯ ಚೆನ್ನಾಗಿತ್ತು. 'ನಟರಾಜ ಸರ್ವೀಸ್' ಮಯೂರಿ ಅಭಿನಯದ ಮತ್ತೊಂದು ಸಿನಿಮಾ.

'ನಟರಾಜ ಸರ್ವೀಸ್' ನಂತರ ಗಾಂಧಿನಗರದಿಂದ ಕಾಣೆಯಾಗಿದ್ದ ಮಯೂರಿ, ಅ.13ರಂದು ತೆರೆ ಕಾಣುತ್ತಿರುವ 'ಕರಿಯ 2' ಚಿತ್ರದ ಮೂಲಕ ಮತ್ತೆ ಸುದ್ದಿಯಲ್ಲಿದ್ದಾರೆ. 'ಕರಿಯ 2' ಮಯೂರಿ ಪಾಲಿಗೆ ಸ್ಮರಣೀಯ ಸಿನಿಮಾ. ಈ ಚಿತ್ರದಲ್ಲಿ ನಟಿಸುವುದರ ಜೊತೆಗೆ ಗೀತೆಯೊಂದನ್ನು ಅವರು ಹಾಡಿದ್ದಾರೆ ಕೂಡ. ಹಾಡುಗಾರಿಕೆಯಲ್ಲಿ ಆಸಕ್ತಿಯಿರುವ ಅವರಿಗೆ, ಗಾಯಕಿಯಾಗಿ ಗುರ್ತಿಸಿಕೊಳ್ಳಲು ಚಿತ್ರತಂಡ ಅವಕಾಶ ಕಲ್ಪಿಸಿದೆ.

ಸುಮಾರು ಒಂದೂವರೆ ದಶಕದ ಹಿಂದೆ ತೆರೆಕಂಡ 'ಕರಿಯ' ನಾಯಕನಟ ದರ್ಶನ್‌ಗೆ ಹೆಸರು ತಂದುಕೊಟ್ಟ ಸಿನಿಮಾ. ಆ ಸಿನಿಮಾದ ಶೀರ್ಷಿಕೆಯ ಚಿತ್ರದಲ್ಲಿ ನಟಿಸುತ್ತಿರುವುದು ಕೂಡ ಮಯೂರಿ ಖುಷಿಗೆ ಕಾರಣವಾಗಿದೆ. 'ಗಣಪ' ಚಿತ್ರದ ನಾಯಕ ಸಂತೋಷ್ 'ಕರಿಯ 2' ಚಿತ್ರದ ನಾಯಕ. ಸಂತೋಷ್‌ರ ತಂದೆ ನಿರ್ಮಾಪಕ ಆನೇಕಲ್ ಬಾಲರಾಜ್ ಅವರೇ ಚಿತ್ರ ನಿರ್ಮಾಣದ ಹೊಣೆ ನಿಭಾಯಿಸಿದ್ದಾರೆ. 'ಗಣಪ' ಚಿತ್ರವನ್ನು ನಿರ್ದೇಶಿಸಿದ್ದ ಪ್ರಭು ಶ್ರೀನಿವಾಸ್ ಈ ಚಿತ್ರವನ್ನೂ ನಿರ್ದೇಶಿಸಿದ್ದಾರೆ.